5

# ಅಲೆದಾಟಗಳ ಕಾಲಾವಧಿ

## ಹೊರಡೋಣದಿಂದ ಯೊರ್ದನ್ ದಾಟುವವರೆಗೆ

## ಕ್ರಿ.ಪೂ. 1491-1451 (ವಿಮೋಚನಕಾಂಡ 15-40, ಯಾಜಕಕಾಂಡ, ಅರಣ್ಯಕಾಂಡ, ಧರ್ಮೋಪದೇಶಕಾಂಡ)

### I. ಕೆಂಪು ಸಮುದ್ರದಿಂದ ಸಿನಾಯಿಗೆ.

### (ವಿಮೋಚನಕಾಂಡ 15-18.)

**1. ವಿಮೋಚನೆಯ ಸಂಗೀತ (ವಿಮೋಚನಕಾಂಡ 15).**-ಕೆಂಪು ಸಮುದ್ರದ ಮೂಡಣ ತೀರದ ಮೇಲೆ ಇಸ್ರಾಯೇಲ್ಯರ ಭಾವನೆಗಳು ಸುಲಭವಾಗಿ ವಿವರಿಸಲ್ಪಟ್ಟಿರುವುದಿಲ್ಲ ಇಲ್ಲವೇ ಸ್ಪಷ್ಟವಾಗಿ ಗ್ರಹಿಸಲ್ಪಟ್ಟಿರುವುದಿಲ್ಲ. ದೀನತೆಯ ಆದಾಗ್ಯೂ ಜಯಪ್ರದವಾದ ಕೃತಜ್ಞತಾಸ್ತುತಿಯು ಹೆಚ್ಚು ಮೇಲಿನ ಅನುಭವವಾಗಿರಬಹುದು. ಅಲ್ಲಿ ಗರ್ವಕ್ಕಾಗಿ ಎಡೆಯಿರಲಿಲ್ಲ. ಅದರ ಆಪತ್ತು ಅತಿಯಾಗಿ ಗಂಡಾಂತರಕಾರಿಯಾಗಿತ್ತು, ಅವರ ವಿಮೋಚನೆಯು ಸಂಪೂರ್ಣವಾಗಿತ್ತು ಮತ್ತು ಯೆಹೋವನ ಸಂಪೂರ್ಣವಾದ ಸುತ್ತಿಯು ಅದ್ಭುತಕರವಾದ ಸಂಗೀತದಲ್ಲಿ ಬಂದಿರುವುದು. ವಿಮೋಚನೆಯ ಸ್ಮಾರಕಗಳಲ್ಲಿ ಒಂದರಂತೆ ಅದು ನಮಗೆ ಬಂದಿರುವುದು.[1]

**2. ರೆಫೀದೀಮ್‌ಗೆ ಪ್ರಯಾಣ.**-ಜಯದ ಸ್ಥಳದಲ್ಲಿಯೇ ಇಸ್ರಾಯೇಲ್ಯರು ಅಂಟಿಕೊಂಡಿರಲಿಕ್ಕಾಗಲಿಲ್ಲ. ಸಿನಾಯಿ ಬಳಿಯಲ್ಲಿ ಜನಾಂಗಿಕ ಸಂಘಟನೆಯು ಪೂರ್ತಿಗೊಳಿಸಲ್ಪಡಬೇಕಾಗಿತ್ತು. ಕೆಲವೊಂದು ಅಂತರದಲ್ಲಿ ಮಾರ್ಗವು ಸಮುದ್ರ ತೀರದ ಪೂರ್ವದ ಅಂಚಿನಲ್ಲಿತ್ತು; "ಶೂರಿನ ಅರಣ್ಯ"ವು ಜಿಲ್ಲೆಯಂತೆ ಕರೆಯಲ್ಪಟ್ಟದ್ದು ಉತ್ತರದಲ್ಲಿತ್ತು, ಮತ್ತು "ಸೀನ್ ಅರಣ್ಯವು" ದಕ್ಷಿಣಕ್ಕಿತ್ತು. ಮಾರಾದಲ್ಲಿ ನೀರನ್ನು ಸಿಹಿಯಾದದ್ದನ್ನಾಗಿ ಮಾಡಿದ್ದು ಮತ್ತು ಏಲೀಮಿನ ಹನ್ನೆರಡು ಬುಗ್ಗೆಗಳು ಮತ್ತು ಎಪ್ಪತ್ತು ಖರ್ಜೂರದ ಮರಗಳು ಇದ್ದ ಸ್ಥಳದಲ್ಲಿ ಬಿಡಾರಬಿಟ್ಟದ್ದು ಇವುಗಳು ಪ್ರಯಾಣದ ಮೊದಲಿನ ಘಟನೆಗಳಾಗಿದ್ದವು. ಹೊರಡೋಣದಿಂದ ಒಂದು ತಿಂಗಳ ಸಮಯ ದಾಟಿಹೋಯಿತು. ಅವರು ಸೀನ್ ಎಂಬ ಭಯಂಕರವಾದ ಅರಣ್ಯವನ್ನು ಪ್ರವೇಶಿಸಿದರು.[2] ಐಗುಪ್ತದಿಂದ ತಂದ ಆಹಾರವು ತೀರುತ್ತಾಬಂದಿತು, ಮತ್ತು ಹಸಿವೆಯೊಂದಿಗೆ ಬಾಯಾರಿಕೆಯ ತೊಂದರೆಗಳೂ ಕೂಡಿಸಲ್ಪಟ್ಟವು. ಹಿಂದಿನ ವಿಮೋಚನೆಗಳನ್ನು ಮತ್ತು ದೇವರ ನಿಶ್ಚಿತವಾದ ವಾಗ್ದಾನಗಳನ್ನು ಮರೆತುಬಿಟ್ಟು, ಸಾಯುವುದಕ್ಕಾಗಿ ತಮ್ಮನ್ನು ಅರಣ್ಯದೊಳಗೆ ತಂದದ್ದಕ್ಕಾಗಿ ಮೋಶೆಯ ಮೇಲೆ ಕಹಿಯಾದ ಧೂಷಣೆಗಳನ್ನು ಜನರು ಹೊರಿಸಿದರು. ಮತ್ತು ಈಗ ದಯೆಯ, ಮನ್ನದ ಅದ್ಭುತಕಾರ್ಯಗಳು ಪ್ರಾರಂಭವಾದವು, ನಲ್ವತ್ತು ವರ್ಷಗಳ ಸಂಚಾರದಲ್ಲಿ ಪ್ರತಿದಿನವೂ ಅನುಸರಿಸಲ್ಪಟ್ಟವು. ಯೇಸುವು ತನ್ನನ್ನು ಪರಲೋಕದ ರೊಟ್ಟಿಯಂತೆ ಸುಂದರವಾದ ಸಂಕೇತವಾಗಿ ಉಪಯೋಗಿಸಿದನು.

**3. ರೆಫೀದೀಮ್‌ನಲ್ಲಿ ಬಿಡಾರ ಬಿಟ್ಟದ್ದು.**-ಇಸ್ರಾಯೇಲ್ಯರು ಈಗ ಸೀನ್ ಅರಣ್ಯದಲ್ಲಿಯ

ಕಠಿಣವಾದ ಬೈಲು ಪ್ರದೇಶವನ್ನು ಬಿಟ್ಟು, ರೆಫೀದೀಮ್ ಕೊಳ್ಳದಲ್ಲಿ ಬಿಡಾರ ಬಿಟ್ಟರು. ಅವರು ಹೋರೆಬ್ ಎಂದು ತಿಳಿಯಲ್ಪಟ್ಟ ಪರ್ವತ ಜಿಲ್ಲೆಯ ಸ್ಥಳಗಳನ್ನು ಪ್ರವೇಶಿಸ ಲಿಕ್ಕಿದ್ದರು. ಇಲ್ಲಿ ಪುನಃ ಅವರು ನೀರಿಗಾಗಿ ಕಷ್ಟಪಟ್ಟರು. ಮೋಶೆಯು ಬಂಡೆಯನ್ನು ಹೊಡೆದನು, ಮತ್ತು ನೀರು ವಿಪುಲವಾಗಿ ಹರಿಯಿತು. ಇಲ್ಲಿ ಅಮಾಲೇಕ್ಯರು ಕೆಡಕಲ್ಪಡದ ಕಠಿಣವಾದ ದಾಳಿ ಮಾಡಿದರು. ಈ ದಾಳಿಯು ಯೆಹೋಶುವನ ನೇತೃತ್ವದಲ್ಲಿ ಆಯ್ದುಕೊಳ್ಳಲ್ಪಟ್ಟ ಜನರಿಂದ ಎದರಿಸಲ್ಪಟ್ಟಿತು, ಆರೋನ ಮತ್ತು ಹೊರರು ಪ್ರಾರ್ಥನೆಯಲ್ಲಿ ಮೋಶೆಯ ಕೈಗಳನ್ನು ಮೇಲಕ್ಕೆತ್ತಿ ಹಿಡಿದಿದ್ದರು. ಇಲ್ಲಿಯೂ ಸಹ ಮೋಶೆಯು ತನ್ನ ಕುಟುಂಬದೊಂದಿಗೆ ಕೂಡಿಕೊಂಡನು, ಅವರು ಮಹಾ ಹೋರಾಟದಲ್ಲಿ ಮತ್ತು ಹೊರಡೋಣದ ಸಮಯದಲ್ಲಿ ಯೆತ್ರೋವನೊಂದಿಗೆ ಉಳಿದಿದ್ದರು. ಯೆತ್ರೋನನು ನ್ಯಾಯತೀರ್ವಿಕೆ ಕೊಡುವ ವಿಷಯವನ್ನು ಕುರಿತು ಮೋಶೆಗೆ ಅಮೂಲ್ಯವಾದ ಸಲಹೆಯನ್ನು ಕೊಟ್ಟಿದ್ದನು.

## II. ಸಿನಾಯಿ ಬಳಿಯಲ್ಲಿಯ ವರ್ಷ.

ರೆಫೀದೀಮಿನಿಂದ, ಮೋಶೆಯು ಇಸ್ರಾಯೇಲ್ಯರನ್ನು ಸಿನಾಯಿ ಪರ್ವತಕ್ಕೆ ನಡಿಸಿದನು. ಆಳವಾದ ಸ್ಥಳಗಳ ಮುಖಾಂತರ ಮಾರ್ಗವು ಭಯಭಕ್ತಿಯಿಂದ ತುಂಬಿದ್ದಾಗಿತ್ತು. ಕೊನೆಗೆ ಅವರು ಸಮಾನವಾದ ಬಯಲಿನಲ್ಲಿ ಇಳಿದುಕೊಂಡರು, ಅದು ಪರಿಶುದ್ಧ ಪರ್ವತದ ಮುಂದಿತ್ತು. ವಿಶಾಲವಾದ ಗ್ರೆನೈಟ್ ಪೀಠದಂತೆ ಇತ್ತು, ನೇರವಾಗಿ ಒಂದು ಸಾವಿರ ಐದುನೂರು ಅಡಿ ಎತ್ತರವಾಗಿತ್ತು.[3]

**1. ಜನಾಂಗಿಕ ಒಡಂಬಡಿಕೆ** (ವಿಮೋಚನಕಾಂಡ 19; 20).-ಅಬ್ರಹಾಮಿಕ್ ಒಡಂಬಡಿಕೆಯು, ಬಹಳ ಸಲ ಪಿತೃಗಳ ಸಮಯದಲ್ಲಿ ನವೀಕರಿಸಲ್ಪಟ್ಟಿತು, ಉರಿಯುವ ಪೊದೆಯ ಬಳಿಯಲ್ಲಿ ಇತ್ತೀಚೆಗೆ ಮೋಶೆಯೊಂದಿಗೆ ನವೀಕರಿಸಲ್ಪಟ್ಟಿತು - ಇಲ್ಲಿ ಗಂಭೀರವಾಗಿ ನವೀಕರಿಸಲ್ಪಟ್ಟಿತು, ಹಾಗೂ ಜನಾಂಗಿಕವಾದ ಒಡಂಬಡಿಕೆಯಲ್ಲಿ ವಿಸ್ತರಿಸಲ್ಪಟ್ಟಿತು. ಅಬ್ರಹಾಮನನ್ನು ಕರೆದಾತನು ಮತ್ತು ಪಿತೃಗಳ ಪರಿಪಾಲನೆ ಮಾಡಿದಾತನು; ಐಗುಪ್ತದಲ್ಲಿ ತನ್ನ ಜನರ ನಿಟ್ಟುಸಿರುಗಳನ್ನು ಕೇಳಿದಾತನು ಮತ್ತು ಅವರನ್ನು ದಾಸತ್ವದಿಂದ ಬಿಡುಗಡೆಗೊಳಿಸಿದಾತನು; ಅವರನ್ನು ನಡಿಸಿದಾತನು ಮತ್ತು ಆಹಾರ ಒದಗಿಸಿದಾತನು ಹಾಗೂ ಅವರ ಪ್ರಯಾಣದಲ್ಲಿ ಅವರನ್ನು ಬೆಂಬಲಸಿದಾತನು, ಈಗ ತನ್ನೊಂದಿಗೆ ವಿಚಿತ್ರವಾದ ಒಡಂಬಡಿಕೆಯ ಸಂಬಂಧಗಳಲ್ಲಿ ಅವರನ್ನು ತೆಗೆದು ಕೊಳ್ಳಲು ಸೂಚಿಸಿದನು. ಮೋಶೆಯ ಮುಖಾಂತರ ದೇವರಿಂದ ಮುಂದಿಡಲ್ಪಟ್ಟ ಒಡಂಬಡಿಕೆಯು ಜನರಿಂದ ಸ್ವೀಕರಿಸಲ್ಪಟ್ಟಿತು, ಒಂದು ಪುಸ್ತಕದಲ್ಲಿ ಬರೆಯಲ್ಪಟ್ಟಿತು ಮತ್ತು ಯಜ್ಞಗಳೊಂದಿಗೆ ಹಾಗೂ ರಕ್ತ ಚಿಮುಕಿಸುವಿಕೆಯೊಂದಿಗೆ ದೃಢಪಡಿಸಲ್ಪಟ್ಟಿತು. ಈ ಒಡಂಬಡಿಕೆಯು ದಶಾಜ್ಞೆಗಳಲ್ಲಿ ವಿಸ್ತರಿಸಲ್ಪಟ್ಟಿತು, ಮೂಲದಲ್ಲಿ ಗುಡುಗು, ಸಿಡಿಲು, ಭೂಕಂಪಗಳ ಮಧ್ಯದಲ್ಲಿ ಸಿನಾಯ ಬೆಟ್ಟದಿಂದ ಹೇಳಲ್ಪಟ್ಟಿತು. ಅನಂತದರಲ್ಲಿ ಕಲ್ಲಿನ ಹಲಿಗೆಗಳ ಮೇಲೆ ದೇವರಿಂದ ಬರೆಯಲ್ಪಟ್ಟವು; ಅವು ಇಂತಿರುತ್ತವೆ:

(1) ನಾನಲ್ಲದ ನಿನಗೆ ಬೇರೆ ದೇವರುಗಳು ಇರಬಾರದು.
(2) ಯಾವ ಮೂರ್ತಿಯನ್ನಾದರೂ ಮಾಡಿಕೊಳ್ಳಬಾರದು.
(3) ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು.

(4) ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.
(5) ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.
(6) ನರಹತ್ಯೆಮಾಡಬಾರದು.
(7) ವ್ಯಭಿಚಾರ ಮಾಡಬಾರದು.
(8) ಕದಿಯಬಾರದು.
(9) ಮತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.
(10) ಆಶಿಸಬಾರದು.

ಇಂಥ ಶ್ರೇಷ್ಠವಾದ ನಿಯಮಾವಳಿಯು ಟುವೆಲ್ವ್ ಟೇಬಲ್ಸ್ ಆಫ್ ರೋಮ್‌ದ ಒಂದು ಸಾವಿರ ವರ್ಷಗಳ ಮೊದಲು, ಮತ್ತು ಲ್ಹಾಸ್ ಆಫ್ ಲಿಕುರ್ಗುಸ್‌ದ ಐದುನೂರು ವರ್ಷಗಳ ಮೊದಲು, ಸಿನಾಯಿ ಬಳಿಯಲ್ಲಿ ಕೊಡಲ್ಪಟ್ಟಿತು. ದಶಾಜ್ಞೆಯು ಇನ್ನೂ ಹೆಚ್ಚಾಗಿ ವಿಸ್ತರಿಸಲ್ಪಟ್ಟು ನಾಗರಿಕ ಹಾಗೂ ಧಾರ್ಮಿಕ ಆಚರಣೆಯ ನಿಯಮಗಳ ಪೂರ್ಣ ಸಂಗ್ರಹವಾಯಿತು.

**2. ಜನಾಂಗಿಕ ಯಾಜಕತ್ವ.**-ಪಿತೃಗಳ ಸಮಯದಲ್ಲಿ ಕುಟುಂಬದ ಮುಖ್ಯಸ್ಥನು ಯಾಜಕನಂತೆ ಕಾರ್ಯಮಾಡುತ್ತಿದ್ದನು. ಹೊರಡೋಣದ ನಂತರ, ಇಡೀ ಜನಾಂಗವು ಪರಿಶುದ್ಧವಾದದ್ದು ಎಂದು ಎಣಿಸಲ್ಪಟ್ಟಾಗ, ಚೊಚ್ಚಲಾಗಿ ಹುಟ್ಟಿದವರು ವಿಶೇಷವಾಗಿ ಹಾಗೆ ಇದ್ದರು (ವಿಮೋಚನಕಾಂಡ 13:2, 11-15). ಅನಂತರದಲ್ಲಿ ಲೇವಿ ಕುಲವು ಚೊಚ್ಚಲಾಗಿ ಹುಟ್ಟಿದವರ ಬದಲಾಗಿ ಯಾಜಕರಂತೆ ಪ್ರತ್ಯೇಕಿಸಲ್ಪಟ್ಟಿತು (ಅರಣ್ಯಕಾಂಡ 3:5-13). ಆರೋನನ ಕುಟುಂಬದವರು ಯೋಗ್ಯ ಯಾಜಕರಾಗಿ ಪ್ರತಿಷ್ಠಿಸಲ್ಪಟ್ಟರು, ಆರೋನನು ಮತ್ತು ಅವನ ನಂತರ ಅವನ ಹಿರಿಯ ಗಂಡು ಮಕ್ಕಳು ನಿರಂತರವಾಗಿ ಯೆಹೂದಿ ಜನಾಂಗದಲ್ಲಿ ಅತೀ ಉನ್ನತವಾದ ಸ್ಥಾನವನ್ನು, ಮಹಾ ಯಾಜಕನ ಸ್ಥಾನವನ್ನು ಹೊಂದಿಕೊಂಡರು.

**3. ಜನಾಂಗಿಕ ಹಬ್ಬಗಳು.**-ಮೂರು ವಾರ್ಷಿಕ ಹಬ್ಬಗಳು ಇದ್ದವು. ಅವೆಲ್ಲವೂ ಅವನ ಜನಾಂಗದ ಇತಿಹಾಸದಲ್ಲಿಯ ಮಹತ್ವದ ಘಟನೆಗಳ ಸ್ಮರಣೆಗಾಗಿ ಇದ್ದವು. ಸುಗ್ಗಿ ಕಾಲದ ಒಂದೊಂದು ಹಂತದಲ್ಲಿ ಆಚರಿಸಲ್ಪಡುವುದಕ್ಕೆ ಸಮಯ ನೇಮಿಸಲ್ಪಟ್ಟಿತು.

*a. ಪಸ್ಕ ಹಬ್ಬ, ಇಲ್ಲವೇ ಹುಳಿಯಿಲ್ಲದ ರೊಟ್ಟಿಯ ಹಬ್ಬ,* ಇದು ಹೊರಡೋಣದ ರಾತ್ರಿ ಯಲ್ಲಿ ಸ್ಥಾಪಿಸಲ್ಪಟ್ಟಿತು, ಮತ್ತು ದಾಸತ್ವದಿಂದ ಅವರ ಬಿಡುಗಡೆಯನ್ನು ಆಚರಿಸಿತು; ಅದು ಅಬೀಬ್ 14-21ರಂದು (ನಮ್ಮ ಎಪ್ರಿಲ್ ಮೊದಲ ಭಾಗ) ಬರುತ್ತಿದ್ದು, ಅದು ಸುಗ್ಗಿಯ ಪ್ರಾರಂಭವನ್ನೂ ಆಚರಿಸಿತು. ಮುಖ್ಯ ಸಂಗತಿಗಳು, ಪಸ್ಕದ ಕುರಿಮರಿಯನ್ನು ಹುಳಿಯಿಲ್ಲದ ರೊಟ್ಟಿ ಮತ್ತು ಕಹಿಯಾದ ಪಲ್ಯಗಳೊಂದಿಗೆ ತಿನ್ನುವಂಥದ್ದು, ಮತ್ತು ಸುಗ್ಗಿಯು ದೇವರಿಗೆ ಕೃತಜ್ಞತೆಯ ಸಂಕೇತವಾಗಿ ಮಾಡಿದ ಕಾಳಿನ ಸಿವುಡನ್ನು ಅಲ್ಲಾಡಿಸುವುದು ಆಗಿತ್ತು.

*b. ವಾರಗಳ ಹಬ್ಬ, ಅಥವಾ ಪಂಚಾಶತ್ತಮ ಹಬ್ಬ.*-ಇದು ಪಸ್ಕ ಹಬ್ಬದ ನಂತರ ಐವತ್ತು ದಿನಗಳ ನಂತರ ಆಚರಿಸಲ್ಪಡುತ್ತಿತ್ತು, ಮತ್ತು ಧಾನ್ಯದ ಸುಗ್ಗಿಯ ಮುಕ್ತಾಯವನ್ನು ಆಚರಿಸಿತು. ಅನಂತರ ಯೆಹೂದ್ಯರು, ಮೊದಲು ಪಸ್ಕ ಹಬ್ಬದ ನಂತರ ಐವತ್ತು ದಿನಗಳ ನಂತರ ಸಂಭವಿಸಿದ ಧರ್ಮಶಾಸ್ತ್ರ ಕೊಡುವಿಕೆಯ ಸ್ಮರಣೆಯಂತೆ ತಿಳಿದು ಕೊಂಡರು. ಮುಖ್ಯ ಧಾರ್ಮಿಕ ಆಚರಣೆಯು ಬೇಯಿಸಿದ ರೊಟ್ಟಿಯ ರೂಪದಲ್ಲಿ ಪ್ರಥಮ ಫಲಗಳನ್ನು ಅರ್ಪಿಸುವುದಾಗಿತ್ತು.

c. *ಪರ್ಣಶಾಲೆಗಳ ಹಬ್ಬ, ಇಲ್ಲವೇ ಸುಗ್ಗಿಯ ಹಬ್ಬ.*-ಇದು ಏಳನೆಯ ತಿಂಗಳಿನ ಹದಿನೈದನೆಯ ದಿನದಿಂದ ಇಪ್ಪತ್ತೆರಡನೆಯ ದಿನದ ವರೆಗೆ ಆಚರಿಸಲ್ಪಡುತ್ತಿತ್ತು. ಇದು ಒಂದು ರೀತಿಯಲ್ಲಿ ಸುಗ್ಗಿಯನ್ನು ಮನೆಗೆ ತರುವುದನ್ನು - ಫಲಗಳ ಸುಗ್ಗಿ ಮಾಡುವುದನ್ನು ಆಚರಿಸುವದಾಗಿತ್ತು. ಅದು ಯೆಹೂದಿ ಕೃತಜ್ಞತಾಸ್ತುತಿಯಾಗಿತ್ತು. ಅರಣ್ಯದಲ್ಲಿ ಡೇರೆಗಳಲ್ಲಿಯ ಜೀವನದ ನಾಲ್ವತ್ತು ವರ್ಷಗಳ ಸ್ಮರಣೆಗಾಗಿ ಅವರು ಒಂದು ವಾರ, ಮರದ ಕೊಂಬೆಗಳ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದರು.

**4. ಜನಾಂಗಿಕ ಪರಿಶುದ್ಧ ಸ್ಥಳ.**-ಸಿನಾಯಿ ಬಳಿಯ ವರ್ಷದ ಸಮಯದಲ್ಲಿ ದೇವದರ್ಶನ ಗುಡಾರವು ಕಟ್ಟಲ್ಪಟ್ಟಿತು. ಅದು ಸಾಗಿಸಲು ಸಾಧ್ಯವಾದ ಸಣ್ಣ ದೇವಾಲಯವಾಗಿತ್ತು. ಹದಿನೈದು X ನಾಲ್ವತ್ತೈದು ಅಡಿ ಇತ್ತು. "ಪರಿಶುದ್ಧ ಸ್ಥಳವು," ಹದಿನೈದು X ಮೂವತ್ತು ಅಡಿ; ಅದು ಧೂಪ ಪೀಠವನ್ನೂ, ನೈವೇದ್ಯದ ರೊಟ್ಟಿಗಳ ಮೇಜು, ಮತ್ತು ಏಳು ಶಾಖೆಗಳ ದೀಪ, ಎಲ್ಲವುಗಳೂ ಬಂಗಾರದವುಗಳಾಗಿದ್ದವು. "ಅತಿ ಪರಿಶುದ್ಧ ಸ್ಥಳ"ವು ಹದಿನೈದು ಅಡಿಗಳ ಘನಾಕೃತಿಯಲ್ಲಿತ್ತು ಮತ್ತು ಪರಿಶುದ್ಧ ಮಂಜೂಷ ಬಿಟ್ಟು ಬೇರೆ ಫರ್ನಿಚರ್ ಇರಲಿಲ್ಲ. ಇದರಲ್ಲಿ ನಿಯಮದ ಹಲಗೆಗಳು, ಮನ್ನದ ಪಾತ್ರೆ, ಮತ್ತು ಚಿಗುರೊಡೆದ ಆರೋನನ ಕೋಲು ಇಡಲ್ಪಟ್ಟಿದ್ದವು. ಅತೀ ಪರಿಶುದ್ಧ ಸ್ಥಳದೊಳಗೆ ಮಹಾ ಯಾಜಕನನ್ನು ಬಿಟ್ಟು ಬೇರೆ ಯಾರೂ ಪ್ರವೇಶಿಸುತ್ತಿದ್ದಿಲ್ಲ. ಪ್ರಾಯಶ್ಚಿತ್ತದ ಮಹಾ ದಿನದಂದು ಮಾತ್ರವೇ ಪ್ರವೇಶಿಸುತ್ತಿದ್ದನು. ಜನರ ಪಾಪಗಳಿಗಾಗಿ ಆಗ ವಾರ್ಷಿಕ ಅರ್ಪಣೆಗಳು ಮಾಡಲ್ಪಡುತ್ತಿದ್ದವು. ದೇವದರ್ಶನ ಗುಡಾರದ ತೆರೆದ ಆವರಣದಲ್ಲಿ ಸರ್ವಾಂಗ ಹೋಮದ ಯಜ್ಞವೇದಿ ಮತ್ತು ಕೈತೊಳೆಯುವ ಪಾತ್ರೆ ಇದ್ದವು. ದೇವದರ್ಶನ ಗುಡಾರವು ಅರಣ್ಯದ ಸಂಚಾರಗಳಲ್ಲಿ ಅವರೊಂದಿಗೆ ಒಯ್ಯಲ್ಪಡುತ್ತಿತ್ತು, ಮತ್ತು ಅನಂತರದಲ್ಲಿ ಶಿಲೋವಿನಲ್ಲಿ ಇಡಲ್ಪಟ್ಟಿತು. ಸೊಲೊಮೋನನು ದೇವಾಲಯವನ್ನು ಕಟ್ಟುವವರೆಗೆ, ಸುಮಾರು ನಾಲ್ಕುನೂರು ವರ್ಷಗಳಿಗಿಂತ ಹೆಚ್ಚು ಸಮಯ ಜಾನಾಂಗಿಕ ಆರಾಧನೆಯ ಸ್ಥಳವಾಗಿ ಅಲ್ಲಿ ಮುಂದುವರಿಯಿತು.

**5. ಜನಾಂಗಿಕ ಯಜ್ಞಗಳು.**-ಹೀಬ್ರೂ ಆರಾಧನೆಯ ಕೇಂದ್ರ ಸಂಗತಿಗಳು ಯಜ್ಞಗಳಾಗಿದ್ದವು. ಇವು ಪ್ರಾಣಿಗಳ ಇಲ್ಲವೇ ನಾಡಿನ ಫಲಗಳಾಗಿದ್ದವು. ಪ್ರಾಣಿ ಯಜ್ಞಗಳಲ್ಲಿ ಮೂರು ಮುಖ್ಯ ವರ್ಗಗಳಿದ್ದವು:

a. *ಸರ್ವಾಂಗ ಹೋಮ ಯಜ್ಞಗಳು.*-ಇವು ಪ್ರತಿದಿನವೂ ಪ್ರಾತಃಕ್ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಅರ್ಪಿಸಲ್ಪಡುತ್ತಿದ್ದವು; ಇಡಿಯಾಗಿ ಸುಡಲ್ಪಡುತ್ತಿದ್ದವು, ಮತ್ತು ದೇವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದಕ್ಕೆ ಸಂಕೇತವಾಗಿದ್ದವು.

b. *ಸಮಾಧಾನ ಯಜ್ಞಗಳು.*-ಈ ಅರ್ಪಣೆಗಳಲ್ಲಿ ವಿಶೇಷವಾದದ್ದು ಯಜ್ಞದ ಒಂದು ಭಾಗವನ್ನು ಅರ್ಪಿಸುವವನು ತನ್ನ ಸ್ನೇಹಿತರನ್ನು ಆಮಂತ್ರಿಸಿ ಅವರಿಗೆ ಔತಣ ಕೊಡಲು ಪ್ರತ್ಯೇಕಿಸಿಡುವುದು ಆಗಿತ್ತು. ಅವು ಅನ್ಯೋನ್ಯತೆಯನ್ನು, ದೇವರೊಂದಿಗೆ ಸಂಪರ್ಕದಲ್ಲಿರುವದನ್ನು ವ್ಯಕ್ತಪಡಿಸುತ್ತಿದ್ದವು, ಹಾಗೂ ಅವು ಕೆಲವು ಸಮಯಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಅರ್ಪಿಸಲ್ಪಡುತ್ತಿದ್ದವು.

c. *ಪ್ರಾಯಶ್ಚಿತ್ತ ಯಜ್ಞಗಳು.*-ಇವು ವೈಯಕ್ತಿಕವಾದವುಗಳು ಇಲ್ಲವೇ ಜನಾಂಗಿಕವಾಗಿದ್ದವು. ಯಾವುದೇ ಆಗಿದ್ದರೂ, ಅದು ಒಂದೇ ಬಲಿಪಶುವನ್ನು ಒಳಗೊಂಡಿರುತ್ತಿತ್ತು. ಒಂದು ಭಾಗವು ಯಜ್ಞವೇದಿಯ ಮೇಲೆ ಸುಡಲ್ಪಡುತ್ತಿತ್ತು; ಒಂದು ಭಾಗವು ಯಾಜಕನಿಂದ ತಿನ್ನಲ್ಪಡಬಹುದಾಗಿತ್ತು, ಆದರೆ ಅದು ಬೇಯಿಸಲ್ಪಟ್ಟ ಪಾತ್ರೆಯು ಧಾತುವಿನದಾಗಿದ್ದರೆ ಅದು ತೊಳೆಯಲ್ಪಡಬೇಕು ಇಲ್ಲವೇ ಮಣ್ಣಿನಿಂದಾಗಿದ್ದರೆ ಒಡೆದು ಹಾಕಲ್ಪಡಬೇಕು. ಒಳಗಿನ ಭಾಗ ಇತ್ಯಾದಿಗಳನ್ನು ಪಾಳೆಯದ ಹೊರಗೆ ಸುಡಬೇಕು.

ಸಮಾಧಾನ ಯಜ್ಞದ ಆಚಾರವು ಪಾಪದ ಹೊಳೆಯ ಪಾಠವನ್ನು ಕಲಿಸುವ ಉದ್ದೇಶವಾಗಿತ್ತು.

**6. ಜನಾಂಗಿಕ ಧರ್ಮ ಭ್ರಷ್ಟತೆ.**-ಸಿನಾಯಿಯ ಬಳಿಯಲ್ಲಿ ಜನಾಂಗಿಕ ಒಡಂಬಡಿಕೆಯ ಮೊದಲು ಮೀರುವಿಕೆ ನಡೆಯಿತು. ಮೋಶೆಯು ಪರ್ವತದ ಮೇಲೆ ಹೋಗಿದ್ದಾಗ, ಅವನಿಲ್ಲದ ಸಮಯದಲ್ಲಿ ಜನರು ತಮ್ಮ ಮುಂದೆ ಹೋಗುವುದಕ್ಕಾಗಿ ದೇವರುಗಳು ಬೇಕೆಂದು ಕೇಳಿಕೊಂಡರು. ಆರೋನನು ಅವರಿಗೆ ಒಪ್ಪಿಕೊಂಡನು ಐಗುಪ್ತದ ಬಸವ ಆರಾಧನೆಯನ್ನು ಅನುಕರಿಸಿ, ಚಿನ್ನದ ಬಸವನ ಎರಕಹೊಯ್ದನು ಮತ್ತು ಇಸ್ರಾಯೇಲ್ಯರು ವಿಗ್ರಹಾರಾಧನೆಯು ಉತ್ಸವದಲ್ಲಿ ತೊಡಗಿದರು. ಮೋಶೆಯು ತನ್ನ ಕೈಗಳಲ್ಲಿ ಕಲ್ಲಿನ ಹಲಗೆಗಳೊಂದಿಗೆ ಹಿಂದಿರುಗಿ ಬಂದನು. ಅವರು ಒಡಂಬಡಿಕೆಯನ್ನು ಮುರಿದದ್ದರಿಂದ, ಒಡಂಬಡಿಕೆಯು ಬರೆಯಲ್ಪಟ್ಟ ಹಲಗೆಗಳನ್ನು ಒಡೆದು ಹಾಕಿದನು, ಅವನ ಪ್ರಾರ್ಥನಾ ವಿಜ್ಞಾಪನೆಯ ಮುಖಾಂತರ ಜನರು ಉಳಿಸಲ್ಪಟ್ಟರು, ಆದಾಗ್ಯೂ ಜನರು ತಮ್ಮ ಅಪರಾಧಕ್ಕೆ ಶಿಕ್ಷೆಯಾಗಿ ಮೂರು ಸಾವಿರ ಜನರು ಬಲಿಯಾದರು; ಒಡಂಬಡಿಕೆಯು ನವೀಕರಿಸಲ್ಪಟ್ಟಿತ್ತು ಹಾಗೂ ಹೊಸ ಹಲಗೆಗಳು ಸಿದ್ಧಪಡಿಸಲ್ಪಟ್ಟವು.

## III. ಸಿನಾಯಿಯಿಂದ ಕಾದೇಶಿಗೆ.

**1. ಜನಗಣತಿ.**-ಸಿನಾಯಿಯಿಂದ ಹೊರಡುವ ಮುನ್ನ ಕುಲಗಳ ಜನಗಣತಿ ಮಾಡಲ್ಪಟ್ಟಿತು. ಮೂವತ್ತೆಂಟು ವರ್ಷಗಳ ನಂತರ, ಸಂಚಾರದ ಕೊನೆಯ ಸಮಯದಲ್ಲಿ ಎರಡನೆಯ ಜನಗಣತಿ ಮಾಡಲ್ಪಟ್ಟಿತು, ಈ ಎರಡು ಜನಗಣತಿಗಳು ಬುಕ್ ಆಫ್ ನಂಬರ್ಸ್ ಎಂಬ ಹೆಸರನ್ನು ಕೊಡುತ್ತವೆ.

**2. ಕಾದೇಶಿಗೆ ಪ್ರಯಾಣ.**-ಸಿನಾಯಿಯಿಂದ, ಹೊರಡೋಣದ ನಂತರ ಒಂದು ವರ್ಷದ ತರುವಾಯ, ಇಸ್ರಾಯೇಲ್ಯರು ಕಾನಾನಿನ ದಕ್ಷಿಣ ಗಡಿಗುಂಟ ಕಾದೇಶಿನ ಕಡೆಗೆ ಪ್ರಯಾಣ ಬೆಳಿಸಿದರು. ಮಾರ್ಗವು ಅರಣ್ಯದ ಮುಖಾಂತರ ಆಯಾಸಕರವಾಗಿತ್ತು. ತಬೇರಾದಲ್ಲಿ ಜನರು ಕಹಿಯಾಗಿ ಗುಣುಗುಟ್ಟಲಾರಂಭಿಸಿದರು. ಹಾಗೂ ಬೆಂಕಿಯಿಂದ ದಹಿಸಲ್ಪಟ್ಟರು. ಪ್ರಯಾಣ ಮುಂದುವರಿಸುವ ಮೊದಲು ಅವರೊಂದಿಗಿದ್ದ ಮಿಶ್ರ ಸಮೂಹದವರಿಂದ ಪ್ರೇರಿಸಲ್ಪಟ್ಟು, ಇಸ್ರಾಯೇಲ್ಯರು ಮನ್ನದ ಬಗ್ಗೆ ಜಿಗುಪ್ಸೆಗೊಂಡರು, ಮತ್ತು ಐಗುಪ್ತದ ಆಹಾರಕ್ಕಾಗಿ ಬಯಸಿದರು. ದೊಡ್ಡ ಸಂಖ್ಯೆಯಲ್ಲಿ ಲಾವಕ್ಕಿಗಳು ಕಳುಹಿಸಲ್ಪಟ್ಟವು; ಆದರೆ ಅವುಗಳೊಂದಿಗೆ ಸಮೂಹಗಳನ್ನು ಕೊಂದು ಹಾಕಿದ ವ್ಯಾಧಿಯು ಬಂದಿತು. ತಬೇರಾಕ್ಯಾಂಪ ಕಿಬ್ರೊತ ಹತಾವಾ (ಹೊಟ್ಟೆ ಬಾಕರ ಸಮಾಧಿ) ಎಂದು ತಿಳಿಯುವಂತಾಯಿತು. ಪ್ರಯಾಣದಲ್ಲಿಯ ಇನ್ನೊಂದು ನೋವಿನ ಘಟನೆಯು ಆರೋನ ಮತ್ತು ಮಿರಿಯಾಮರು ವಿರೋಧಿಸಿದ್ದು. ಮಿರಿಯಾಮಳು ಕುಷ್ಠರೋಗ ಹೊಂದಿದಳು ಮತ್ತು ಮೋಶೆಯ ಪರಾರ್ಥ ವಿಜ್ಞಾಪನೆಯಿಂದ ಗುಣಮುಖಳಾದಳು.

**3. ವಿಶ್ವಾಸದ ಮುರಿದು ಬೀಳುವಿಕೆ.**-ದೇಶವನ್ನು ಸಂಚರಿಸಿ ನೋಡಲು ಕಾದೇಶಿನಿಂದ ಹನ್ನೆರಡು ಜನ ಗೂಢಾಚಾರರು ಕಳುಹಿಸಲ್ಪಟ್ಟರು. ದೇಶವನ್ನು ಹೊಗಳುವುದರಲ್ಲಿ ಒಮ್ಮನಸ್ಸಿನಿಂದ ಅವರು ಹಿಂದಿರುಗಿದರು ಮತ್ತು ಅವರ ಫಲಭರಿತತೆಯ ಬಗ್ಗೆ ತೋರಿಸಲು ಹುಲುಸಾಧ ಫಲಗಳನ್ನು ತಂದರು. ಆದರೆ ಕಾಲೇಬ ಮತ್ತು ಯೆಹೋಶುವನನ್ನು ಹೊರತುಪಡಿಸಿ ಎಲ್ಲರೂ ಜಯದ ಕಾರ್ಯದ ಬಗ್ಗೆ ನಿರಾಶಾದಾಯಕ ವರದಿ ಕೊಟ್ಟರು. ಜನಾಂಗದ ನಂಬಿಕೆಯು ಮುರಿದು ಬಿದ್ದಿತು. ಅವರು ಇನ್ನೊಬ್ಬ ನಾಯಕನನ್ನು ಆಯ್ದುಕೊಂಡು ಐಗುಪ್ತಕ್ಕೆ ಹಿಂದಿರುಗಿ ಹೋಗುವುದನ್ನು ಆಲೋಚಿ ಸಿದರು. ಅವರನ್ನು ಹುರಿದುಂಬಿಸಲು ಪ್ರಯತ್ನಿಸಿದ ಕಾಲೇಬ ಮತ್ತು ಯೆಹೋಶುವರು ಕಲ್ಲೆಸೆತದಿಂದ

ತಪ್ಪಿಸಿಕೊಂಡರು. ಮೊದಲು ಹಲವಾರು ಸಲ ಅವರ ನಂಬಿಕೆಯು ಬಲಹೀನಗೊಳಿಸಲ್ಪಟ್ಟು, ಅಲ್ಲಾಡಿಸಲ್ಪಟ್ಟಿತ್ತು; ಈ ಮೊದಲು ಅವರು ವಾಗ್ದಾತ್ತ ದೇಶಕ್ಕೆ ತಮ್ಮ ಬೆನ್ನುಹಾಕಿ ಹಿಂದಿರುಗುವ ವಿಚಾರ ಮಾಡಿರಲಿಲ್ಲ; ತಮ್ಮ ಮುಖವನ್ನು ದಾಸತ್ವದ ಮನೆಯ ಕಡೆಗೆ ತಿರುಗಿಸಿರಲಿಲ್ಲ. ಈಗ ಅದು ಅವರ ಅವಿಶ್ವಾಸದ ಅಂತ್ಯಸ್ಥಿತಿಯಾಗಿತ್ತು (ಇಬ್ರಿಯ 3:19). ಮೂವತ್ತೆಂಟು ವರ್ಷಗಳ ದೀರ್ಘಕಾಲ ಅವಿಶ್ವಾಸಿ ಜನಾಂಗವು ಸಂಚರಿಸುವ ಶಿಕ್ಷೆಪಡೆದುಕೊಂಡಿತ್ತು; ಒಬ್ಬರ ನಂತರ ಒಬ್ಬರು ಅರಣ್ಯದಲ್ಲಿ ಸತ್ತು ಹೋದರು. ಕಾಲೇಬ ಮತ್ತು ಯೆಹೋಶುವ ಮಾತ್ರವೇ ಕಾನಾನ್ ಪ್ರವೇಶಿಸಲು ಉಳಿದುಕೊಂಡರು. ಈ ಮೂವತ್ತೆಂಟು ವರ್ಷಗಳು ಹೆಚ್ಚಾಗಿ ಬರಿದಾಗಿದ್ದವು; ಸಬ್ಬತ್ತ ದಿನ ಮುರಿದವನಿಗೆ ಶಿಕ್ಷೆ, ಕೋರಹ, ದಾತಾನ, ಅಬಿರಾಮರ ದಂಗೆ ಮತ್ತು ಆರೋನನ ಕೋಲನ್ನು ಚಿಗುರೊಡೆಯುವಂತೆ ಮಾಡಿ, ಮಹಾ ಯಾಜಕನಂತೆ ಅವನ ಅಧಿಕಾರವನ್ನು ದೃಢಪಡಿಸಿದ್ದು, ಇವು ಈ ಅವಧಿಯ ಘಟನೆಗಳಾಗಿವೆ. ಅದರ ಅಂತ್ಯದಲ್ಲಿ ಇಸ್ರಾಯೇಲು ಕಾನಾನಿಗೆ ಅಂತಿಮವಾಗಿ ಮುಂದುವರಿಯಲು ಪುನಃ ಇಸ್ರಾಯೇಲ್ಯರು ಕಾದೇಶಿನಲ್ಲಿ ಕೂಡಿಬಂದರು.

## IV. ಕಾದೇಶಿನಿಂದ ಯೊರ್ದನಿಗೆ.

ಕಾದೇಶಿನಲ್ಲಿ ಎರಡನೆಯ ಪ್ರಯಾಣದಲ್ಲಿ, ಮೋಶೆ ಮತ್ತು ಆರೋನರು ಎರಡನೆಯ ಸಲ ಬಂಡೆಯನ್ನು ಹೊಡೆದು ಪಾಪ ಮಾಡಿದರು ಮತ್ತು ವಾಗ್ದಾತ್ತ ದೇಶವನ್ನು ಪ್ರವೇಶಿಸಲು ಅಪ್ಪಣೆಹೊಂದಲಿಲ್ಲ. ಇಲ್ಲಿ ಮಿರಿಯಾಮಳು ಸತ್ತು ಹೋದಳು. ಏಸಾವನ ವಂಶಜರಾದ ಎದೋಮ್ಯರು ತಮ್ಮ ಪಟ್ಟಣಗಳಲ್ಲಿ ಹಾದು ಹೋಗುವುದನ್ನು ನಿರಾಕರಿಸಿದರು ಮತ್ತು ಇಸ್ರಾಯೇಲ್ಯರು ಕೆಂಪು ಸಮುದ್ರದ ಪೂರ್ವ ಭಾಗವನ್ನು ಸ್ಪರ್ಷಿಸುವಂತೆ ದಕ್ಷಿಣಕ್ಕೆ ಉದ್ದವಾದ ಪ್ರಯಾಣ ಮಾಡಬೇಕಾತ್ತು. ಮಾರ್ಗದಲ್ಲಿ ಆರೋನನು ಸತ್ತು ಹೋದನು ಮತ್ತು ಹೋರ್ ಬೆಟ್ಟದಲ್ಲಿ ಹೂಣಿಡಲ್ಪಟ್ಟನು. ಅವಿಶ್ವಾಸದ ಹೊಸ ವಿರೋಧಕ್ಕಾಗಿ ದಂಡನೆಯಾಗಿ ಉರಿಸರ್ಪಗಳು ಕಳುಗಿಸಲ್ಪಟ್ಟವು. ಮೋಶೆಯು ತಾಮ್ರದ ಸರ್ಪವನ್ನು ಧ್ವಜ ಸ್ಥಂಭದ ಮೇಲೆ ಇಟ್ಟನು, ಅದರ ಅರ್ಥ ಗುಣಪಡಿಸುವಿಕೆ, ಒಂದು ರೀತಿಯ ಕ್ರಿಸ್ತನು ಶಿಲುಭೆಯ ಮೇಲೆ ಇದ್ದುದಾಗಿತ್ತು. ಯೊರ್ದನಿನ ಪೂರ್ವದಿಕ್ಕಿನಲ್ಲಿಯ ಬಲಶಾಲಿ ಅಮೋರಿಯರ ಮುಖ್ಯಸ್ಥರಾದ ಓಗ್ ಮತ್ತು ಸಿಹೋನರನ್ನು ಇಸ್ರಾಯೇಲ್ಯರು ಜಯಿಸಿದರು. ರೂಬೇನ್ ಗಾದ್ ಮತ್ತು ಮನಾಸ್ಸೆಯು ಅರ್ಧ ಕುಲಗಳು ತಮ್ಮ ಕ್ಷೇತ್ರದಲ್ಲಿ ನೆಲೆಗೊಂಡವು. ಇಸ್ರಾಯೇಲಿನ ಪ್ರಗತಿಪರ ಜಯದ ಬಗ್ಗೆ ಗಾಭರಿಗೊಂಡ ಮೋವಾಬಿನ ಅರಸನು ಅವರ ಮೇಲೆ ಶಾಪಹಾಕಲು ಪ್ರಸಿದ್ಧ ದರ್ಶಿಯಾಗಿದ್ದ ಬಿಳಾಮನಿಗೆ ಲಂಚಕೊಟ್ಟನು. ಅವನ ಶಾಪಗಳು ಪ್ರತೀಸಲ ಅವನ ತುಟಿಗಳ ಮೇಲೆ ಆಶೀರ್ವಾದಗಳಾಗಿ ತಿರುಗಿಸಲ್ಪಟ್ಟವು. ಆದರೆ ಅವನು ನೇರವಾಗಿ ಮಾಡಲಾಗದ್ದನ್ನು ಪರೋಕ್ಷವಾಗಿ ಸಾಧಿಸಿದನು. ಇಸ್ರಾಯೇಲನ್ನು ಅವನು ಮೋವಾಬ್ ಮತ್ತು ಮಿದ್ಯಾನಿನೊಂದಿಗೆ ಪಾಪದಲ್ಲಿ ಒಳಗೊಳ್ಳುವಂತೆ ಮಾಡಿದನು, ಮತ್ತು ಸಾವಿರಾರು ದೇವರ ಜನರು ಶಿಕ್ಷೆಯಾಗಿ ಕಳುಹಿಸಲ್ಪಟ್ಟ ಪಿಡುಗಿನಲ್ಲಿ ಸತ್ತು ಹೋದರು. ಆದರೆ ಕೊನೆಗೆ ಫಲವಿಲ್ಲದ ಅರಣ್ಯಗಳಲ್ಲಿಯ ಎಲ್ಲಾ ಗಂಡಾಂತರಗಳಿದ್ದರೂ ಉಗ್ರರಾದ ವೈರಿಗಳು ಮತ್ತು ತಮ್ಮ ಸ್ವಂತ ಅಪನಂಬಿಕೆಯಿದ್ದರೂ ಇಸ್ರಾಯೇಲ್ಯರು ಯೊರ್ದನಿನ ಪೂರ್ವದಿಕ್ಕಿನಲ್ಲಿ ಬಿಡಾರಬಿಟ್ಟರು. ಮೋಶೆಯು ತನ್ನ ಬೀಳ್ಕೊಡುಗೆಯ ಭಾಷಣ ಮಾಡಿದನು, ಅದು ಧರ್ಮೋಪದೇಶಕಾಂಡದ ಬಹುಭಾಗವನ್ನು ತುಂಬಿಕೊಂಡಿರುತ್ತದೆ. ಮೃತ ಸಮುದ್ರದ ಪೂರ್ವದಲ್ಲಿಯ ಪಿಸ್ಗಾ ಬೆಟ್ಟದ ಮೇಲಿನಿಂದ ಅವನಿಗೆ ವಾಗ್ದತ್ತ ದೇಶವು ತೋರಿಸಲ್ಪಟ್ಟಿತು. ಅಲ್ಲಿ ಅವನು

ಮರಣ ಹೊಂದಿದನು, ತಿಳಿಯದ ಸಮಾಧಿಯಲ್ಲಿ ಅವನು ಹೂಣಿಡಲ್ಪಟ್ಟನು. ಅವನ ಕಾರ್ಯ ಮುಗಿಯಿತು. ಅವನು ತನ್ನ ಜನರನ್ನು ವಿಮೋಚಿಸಿದನು, ಗುಲಾಮರ ಕುಲವನ್ನು ಒಂದು ಸಂಘಟಿತ ಜನಾಂಗವನ್ನಾಗಿ ಮಾರ್ಪಡಿಸಿದನು ಮತ್ತು ವಾಗ್ದಾತ್ತ ದೇಶದ ಬಾಗಿಲುಗಳ ಬಳಿಗೆ ನಡಿಸಿದನು. ಒಟ್ಟಾಗಿ ಅವನು ತನ್ನ ನಿಯೋಗವನ್ನೂ ತನ್ನ ಜೀವವನ್ನೂ ಕೆಳಗಿಟ್ಟನು.

---

ಟಿಪ್ಪಣಿಗಳು

[1]ಮೋಶೆಯ ಗೀತದ ಮತ್ತು ಪೆಂಟಾರ್ ಪದ್ಯದ ಮಧ್ಯದಲ್ಲಿಯ ವ್ಯತ್ಯಾಸದ ಬಗ್ಗೆ, ಗಿಬ್‌ಸನ್ಸ್ "Mosaic Era," p. 62 ನೋಡಿರಿ. [2]ಈ ಅರಣ್ಯ ಪ್ರದೇಶಗಳಲ್ಲಿಯ ಪ್ರಯಾಣದ ವಿವರಣೆಗಳಿಗಾಗಿ ನೋಡಿರಿ, Geikie's "Hours with the Bible," Vol. II., pp. 200, 201, 210, 211. [3]ನೋಡಿರಿ "Hours with the Bible," Vol. II., pp. 251-253, 261-264.

© 2009 Truth for Today